ಶಿವರುದ್ರಪ್ಪನವರ ಅತ್ಯಾಪ್ತ ವರ್ಗದಲ್ಲಿದ್ದವರು ನಾಗಭೂಷಣ್. ಅಂಥ ಸಜ್ಜನ ಶ್ರೇಷ್ಠರೇ ಒಮ್ಮೆ ಮೂರನೆಯವರ ಬಳಿ ನಾಗಭೂಷಣ್ 'ವಕ್ರ' ಅಂದಿದ್ದರಂತೆ! ಅವರಿಗೆ ನಾಗಭೂಷಣರ ಉತ್ತರ ಹೀಗಿದೆ: "...ನಿಮಗೆ ಜಗತ್ತು ನೇರವಾಗಿ ಕಾಣುತ್ತಿರುವುದೇ ನಮ್ಮಂತಹವರ 'ವಕ್ರತೆ'ಯಿಂದ!" – ಇಂಥ ವಕ್ರೋಕ್ತಿ ವಿನಿಮಯದ ನಂತರವೂ ಅವರಿಬ್ಬರ ನಡುವಿನ ಪ್ರೀತಿ–ಗೌರವ ಅಚ್ಚಳಿಯದಂತಿತ್ತು. ಈ ವಕ್ರತುಂಡ ತೀರಿಕೊಂಡ ಮರುದಿನ ಪ್ರಜ್ಞಾವಂತ ಕನ್ನಡ ಓದುಗರ ಪತ್ರಿಕೆ 'ಪ್ರಜಾವಾಣಿ'ಯಲ್ಲಿ ನಾಡಿನ ಶ್ರೇಷ್ಠ ವಿಮರ್ಶಕ, ಚಿಂತಕ, ಪ್ರೊಫೆಸರ್ ರಾಜೇಂದ್ರ ಚೆನ್ನಿಯವರು ಬರೆದ 'ನುಡಿ ನಮನ'ವನ್ನು ಇಡಿಯಾಗಿ ಉದ್ಧರಿಸಬೇಕೆಂಬ ನನ್ನ ತೀವ್ರವಾದ ಆಸೆಯನ್ನು ಮೊಟಕುಗೊಳಿಸಿ ಸಂಕ್ಷಿಪ್ತ ರೂಪದಲ್ಲಿ ಅವರ ಕೆಲವು ಮಾತುಗಳನ್ನು ದಾಖಲಿಸುತ್ತೇನೆ: "ಅನೇಕ ದಶಕಗಳಿಂದ ವಿಮರ್ಶೆ, ವಿಶ್ಲೇಷಣೆ, ವಾದ–ಪ್ರತಿವಾದ ಹಾಗೂ ಜಗಳಗಳ ಮೂಲಕ ಕನ್ನಡದ ನೈತಿಕ ಪ್ರಜ್ಞೆಯನ್ನು ಹಸನಾಗಿಡಲು ದಣಿವಿಲ್ಲದೆ ದುಡಿದವರು. ಶಾಶ್ವತವಾದ ವಿರೋಧ ಪಕ್ಷದಂತೆ ಅತಾರ್ಕಿಕತೆ, ಅಪ್ರಾಮಾಣಿಕತೆ ಹಾಗೂ ಅಜ್ಞಾನಗಳಿಂದ ಹದಗೆಡುತ್ತಿದ್ದ ಸಮುದಾಯದ ಸಂವೇದನೆಯನ್ನು ಎಚ್ಚರಿಸಿದ ಧೀಮಂತ ಚಿಂತಕ. ಸಮಾಜವಾದದಲ್ಲಿ ಅವರಿಗಿದ್ದ ಅಪ್ಪಟ ವಿಶ್ವಾಸವು ಬೆರಗು ಹುಟ್ಟಿಸುವಂತಿತ್ತು. ಅರ್ಥಪೂರ್ಣವಲ್ಲದ ಯಾವ ಕೆಲಸವನ್ನೂ ಅವರು ಒಪ್ಪುತ್ತಿರಲಿಲ್ಲ. ಅವರು ಪರಿಭಾವಿಸಿದ ಕನ್ನಡವು ಬರಿ ಭಾಷೆಯಾಗಿರಲಿಲ್ಲ; ಒಂದು ಸ್ವಯಂಪೂರ್ಣ ನಾಗರಿಕತೆ, ಸಂಸ್ಕೃತಿಯಾಗಿತ್ತು. ವಿಮರ್ಶೆ ಹಾಗೂ ಪ್ರತಿರೋಧಗಳು ದೇಶದ್ರೋಹವೆಂದು ಪರಿಗಣಿತವಾದ ಈ ಕಾಲದಲ್ಲಿ ನಾಗಭೂಷಣರು ಸಮಜಾಯಿಷಿಯೇ ಇಲ್ಲದೆ ಸಮಗ್ರ ಸಾಂಸ್ಕೃತಿಕ ಪ್ರತಿರೋಧದ ಉಜ್ವಲ ಸಂಕೇತವಾಗಿ ಕಾಣುತ್ತಾರೆ." ಶಿವಮೊಗ್ಗದಲ್ಲೆ ವಾಸವಾಗಿರುವ ಚೆನ್ನಿಯವರು ನಾಗಭೂಷಣರ ಜಗಳಗಂಟಿತನವನ್ನು ತುಂಬ ಹತ್ತಿರದಿಂದಲೇ ನೋಡಿಯೂ ಅನುಭವಿಸಿಯೂ ತಮ್ಮ 'ನುಡಿ ನಮನ'ದಲ್ಲಿ ಆಡಿರುವ ಮಾತುಗಳು ಆಧುನಿಕ ಕನ್ನಡ ಸಾಂಸ್ಕೃತಿಕ ಚರಿತ್ರೆಯ ಸಂದರ್ಭದಲ್ಲಿ ಅತ್ಯಂತ ಮಹತ್ವಪೂರ್ಣವಾದಂತಹವು. 'ಪ್ರಜಾವಾಣಿ' ದಪ್ಪದಪ್ಪ ಅಕ್ಷರಗಳಲ್ಲಿ, 'ಕನ್ನಡದ ನೈತಿಕ ಪ್ರಜ್ಞೆ ಹಸನಾಗಿಸಿದ ನಾಗಭೂಷಣ', ಎಂಬ ಶೀರ್ಷಿಕೆಯ ಅಡಿಯಲ್ಲಿ ಪ್ರಕಟಿಸಿ ಕನ್ನಡದ ಪ್ರಜ್ಞಾವಂತರೆಲ್ಲರ ಋಣಮುಕ್ತ ಸ್ವರೂಪದ ಶ್ರೀಮಂತ ಶ್ರದ್ಧಾಂಜಲಿಯನ್ನು ಅರ್ಪಿಸಿತು. ಅದಕ್ಕೆ ಅತ್ಯಂತ ಉಚಿತ ರೀತಿಯಲ್ಲಿ ನಾಗಭೂಷಣ ಭಾಜನರಾಗಿದ್ದರು. ಸದಾ ಸಮಾಜದ ನೈತಿಕ ಎಚ್ಚರವನ್ನು ಕಾಪಾಡಲು ಹೆಣಗಿದ ವ್ಯಕ್ತಿಯೊಬ್ಬನಿಗೆ ಇದಕ್ಕಿಂತ ಹೆಚ್ಚಿನದೇನು ಬೇಕು.

ಎಪ್ಪತ್ತು ವರ್ಷಗಳನ್ನು ದಾಟಿ ಮರೆಯಾದ ನಾಗಭೂಷಣ (ಜನನ: ಫೆ. 1, 1953) ಎಪ್ಪತ್ತರ ದಶಕದ ಹಾಗೂ ಸೆಂಟ್ರಲ್ ಕಾಲೇಜಿನ ಪ್ರಾಡಕ್ಟ್. ಎಪ್ಪತ್ತು ಎಂಬತ್ತರ ದಶಕಗಳ ಕರ್ನಾಟಕದ ಮತ್ತು ಇಂಡಿಯಾದ ರಾಜಕೀಯ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯ ಮತ್ತು ಪಲ್ಲಟಗಳ ಬಗ್ಗೆಯಾಗಲೀ, ಹಾಗೆಯೇ ಕನ್ನಡ ಜಗತ್ತಿನ ಮಟ್ಟಿಗೆ ಸೆಂಟ್ರಲ್ ಕಾಲೇಜಿನ ಪರಿಸರದ ಬಗ್ಗೆಯಾಗಲಿ ವಿವರಿಸುವ ಅಗತ್ಯವಿಲ್ಲ. ಆ ಸಂಗತಿಗಳು ಈಗಾಗಲೇ ಅನೇಕ ಸಂದರ್ಭಗಳಲ್ಲಿ ದಾಖಲಾಗಿವೆ. ಆಗಿನ ಎಲ್ಲ ವಿದ್ಯಮಾನಗಳನ್ನು ಅವರು ತಮ್ಮ ಮೌಲಿಕ ಗ್ರಹಿಕೆಗೆ ಒಳಪಡಿಸಿದ್ದರು. ಗಣಿತದ ಪ್ರಮೇಯಗಳ ಜೊತೆಗೆ ಗುದ್ದಾಡುತ್ತಾ (ಅಥವಾ ಜಗಳ!) ಎಂ.ಎಸ್ಸಿ. ಮುಗಿಸಿದ ನಾಭೂ (ಆಗೀಗ ನಾವು ಹೀಗೂ ಕರೆಯುತ್ತಿದ್ದೆವು) ಸ್ವಲ್ಪ ಹೆಚ್ಚುಕಡಿಮೆಯಾಗಿದ್ದಿದ್ದರೆ ಜಿಎಸ್ಸೆಸ್ ಅವರ ನೇರ ವಿದ್ಯಾರ್ಥಿಯಾಗಿ ಕನ್ನಡ ಎಂ.ಎ. ಮುಗಿಸುತ್ತಿದ್ದರು. ಸಾಹಿತ್ಯಾಸಕ್ತಿಯನ್ನು ಮೊದಲಿನಿಂದಲೂ ರೂಢಿಸಿಕೊಳ್ಳುತ್ತಿದ್ದ ಅವರಿಗೆ ಸೆಂಟ್ರಲ್ ಕಾಲೇಜಿನ 'ಪಿ.ಪಿ. ಕಟ್ಟೆ' ಮತ್ತು ಸೆನೆಟ್ ಹಾಲಿನಲ್ಲಿ ಆಗ ನಡೆಯುತ್ತಿದ್ದ ವಿಚಾರ ಸಂಕಿರಣಗಳು ಇಂಬಾಗಿ ಒಂದು ರೀತಿಯಲ್ಲಿ ಅವರು ಕನ್ನಡ ಎಂ.ಎ. ಕಲಿಯುವ ಎಕ್ಸ್‌ಟರ್ನಲ್ ಸ್ಟೂಡೆಂಟೇ ಆಗಿದ್ದರು!